**A**

**CCE RR**
**REVISED**
**FULL SYLLABUS**

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,
ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2023

**S.S.L.C. EXAMINATION, JUNE, 2023**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 12. 06. 2023 ] ಸಂಕೇತ ಸಂಖ್ಯೆ : **01-K**

Date : 12. 06. 2023 ] CODE No. : **01-K**

## ವಿಷಯ : ಪ್ರಥಮ ಭಾಷೆ — ಕನ್ನಡ

## Subject : First Language — KANNADA

(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)

[ ಗರಿಷ್ಠ ಅಂಕಗಳು : 100

[ Max. Marks : 100

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| I. | ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) : | 6 × 1 = 6 |
| 1. | ಸಜಾತೀಯ ಸಂಯುಕ್ತಾಕ್ಷರಕ್ಕೆ ಉದಾಹರಣೆಯಾದ ಪದವಿದು<br>(ಎ) ಶಸ್ತ್ರ (ಬಿ) ಎಚ್ಚರ<br>(ಸಿ) ಅದ್ಭುತ (ಡಿ) ಅಕ್ಷರ<br>ಉತ್ತರ : (ಬಿ) ಎಚ್ಚರ | |

[ Turn over

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | 'ದೇವೇಂದ್ರ' ಪದವು ಈ ಸಂಧಿಗೆ ಉದಾಹರಣೆಯಾಗಿದೆ<br>(ಎ) ಲೋಪ ಸಂಧಿ (ಬಿ) ಆಗಮ ಸಂಧಿ<br>(ಸಿ) ಗುಣ ಸಂಧಿ (ಡಿ) ಆದೇಶ ಸಂಧಿ<br>**ಉತ್ತರ :** (ಸಿ) ಗುಣ ಸಂಧಿ | |
| 3. | ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು<br>(ಎ) ಸಾಮಾನ್ಯ ವಾಕ್ಯ (ಬಿ) ಮಿಶ್ರವಾಕ್ಯ<br>(ಸಿ) ಪ್ರಶ್ನಾರ್ಥಕ ವಾಕ್ಯ (ಡಿ) ಸಂಯೋಜಿತ ವಾಕ್ಯ<br>**ಉತ್ತರ :** (ಡಿ) ಸಂಯೋಜಿತ ವಾಕ್ಯ | |
| 4. | ಷಷ್ಠೀ ವಿಭಕ್ತಿಯ ಕಾರಕಾರ್ಥ<br>(ಎ) ಸಂಬಂಧ (ಬಿ) ಅಧಿಕರಣ<br>(ಸಿ) ಸಂಪ್ರದಾನ (ಡಿ) ಅಪಾದಾನ<br>**ಉತ್ತರ :** (ಎ) ಸಂಬಂಧ | |
| 5. | 'ವ್ಯಾಪಾರಿ' ಪದವು ನಾಮಪದದ ಈ ಗುಂಪಿಗೆ ಸೇರಿದೆ<br>(ಎ) ಭಾವನಾಮ (ಬಿ) ರೂಢನಾಮ<br>(ಸಿ) ಅನ್ವರ್ಥನಾಮ (ಡಿ) ಅಂಕಿತನಾಮ<br>**ಉತ್ತರ :** (ಸಿ) ಅನ್ವರ್ಥನಾಮ | |
| 6. | ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ<br>(ಎ) ಉದ್ಧರಣ ಚಿಹ್ನೆ (ಬಿ) ಆವರಣ ಚಿಹ್ನೆ<br>(ಸಿ) ಭಾವಸೂಚಕ ಚಿಹ್ನೆ (ಡಿ) ವಾಕ್ಯವೇಷ್ಟನ ಚಿಹ್ನೆ<br>**ಉತ್ತರ :** (ಎ) ಉದ್ಧರಣ ಚಿಹ್ನೆ | |
| **II.** | **ಸಂಬಂಧಿಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :** | **4 × 1 = 4** |
| 7. | ಕಟ್ಟಕಡೆಗೆ : ದ್ವಿರುಕ್ತಿ :: ಹುಳಹುಪ್ಪಡಿ : ........................ .<br>**ಉತ್ತರ :** ಜೋಡುನುಡಿ | |
| 8. | ಸ್ಥಾನ : ತಾಣ :: ವಂಧ್ಯಾ : ........................ .<br>**ಉತ್ತರ :** ಬಂಜೆ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 9. | ಆ ಕಲ್ಲು : ಗಮಕ ಸಮಾಸ :: ಕಣ್ದೆರೆ : ....................... .<br>**ಉತ್ತರ :** ಕ್ರಿಯಾ ಸಮಾಸ | |
| 10. | ಮಾಡೋಣ : ವಿಧ್ಯರ್ಥಕ :: ಮಾಡರು : .................. .<br>**ಉತ್ತರ :** ನಿಷೇಧಾರ್ಥಕ | |
| **III.** | **ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು.**<br>**(ವಾಕ್ಯರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | **7 × 1 = 7** |
| 11. | ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಯಾವುದು ?<br>**ಉತ್ತರ :**<br>ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ 'ಚೇರಿಂಗ್ ಕ್ರಾಸ್'. | |
| 12. | ದರ್ಭೆಯ ಚಿಗುರು ಯಾವ ಗುಣವನ್ನು ಒರೆಸಿ ಬಿಡುತ್ತದೆ ?<br>**ಉತ್ತರ :**<br>ದರ್ಭೆಯ ಚಿಗುರು ರಾಜರ ಕ್ಷಮಾಗುಣವನ್ನು ಒರೆಸಿ ಬಿಡುತ್ತದೆ. | |
| 13. | ನಮಗೆ ಯಾವ ವ್ಯಕ್ತಿ ಆದರ್ಶವಾಗಬಲ್ಲನು ?<br>**ಉತ್ತರ :**<br>ನಮ್ಮಿಂದ ಎಂದೂ ದೂರವಾಗದಂಥ ಹಾಗೂ ನಾವೂ ಆತನಿಂದ ದೂರ ಹೋಗದಂಥ ವ್ಯಕ್ತಿ ನಮಗೆ ಆದರ್ಶವಾಗಬಲ್ಲನು. | |
| 14. | ಧರ್ಮದ ಆಚರಣೆಗಿರುವ ಪ್ರಧಾನ ಮಾರ್ಗ ಯಾವುದು ?<br>**ಉತ್ತರ :**<br>ಧರ್ಮದ ಆಚರಣೆಗಿರುವ ಪ್ರಧಾನ ಮಾರ್ಗ 'ಯಜ್ಞ'. | |
| 15. | ಕರ್ಣನಿಗೆ ಆಮಿಷಗಳನ್ನು ಒಡ್ಡಿದವರು ಯಾರು ?<br>**ಉತ್ತರ :**<br>ಕರ್ಣನಿಗೆ ಆಮಿಷಗಳನ್ನು ಒಡ್ಡಿದವರು ಕೃಷ್ಣ. | |
| 16. | ದ್ರೋಣರು ಪರಶುರಾಮನ ಬಳಿಗೆ ಏಕೆ ಬಂದರು ?<br>**ಉತ್ತರ :**<br>ದ್ರೋಣರಿಗೆ ಬಡತನ ಬಂದಿದ್ದರಿಂದ ದ್ರವ್ಯಾರ್ಥಿಯಾಗಿ ಪರಶುರಾಮನ ಬಳಿಗೆ ಬಂದನು. | |
| 17. | ಒಡೆಯನ ಅಂಗಳದಲ್ಲಿ ಮಾವಿನ ಮರಗಳು ಹೇಗೆ ಬೆಳೆದು ನಿಂತಿವೆ ?<br>**ಉತ್ತರ**<br>ಒಡೆಯನ ಅಂಗಳದಲ್ಲಿ ಮಾವಿನ ಮರಗಳು ಮೈತುಂಬಿ ಬೆಳೆದು ನಿಂತಿವೆ. | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| IV. | ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು) : | 10 × 2 = 20 |
| 18. | ರಾಮಲಕ್ಷ್ಮಣರನ್ನು ಶಬರಿ ಹೇಗೆ ಉಪಚರಿಸಿದಳು ?<br>*ಉತ್ತರ :*<br>ರಾಮ ಬಂದು ನಿಂತಿರುವುದನ್ನು ಕಂಡು ಶಬರಿ ಬೆರಗಾಗುತ್ತಾಳೆ. ಹತ್ತಿರಕ್ಕೆ ಹೋಗಿ ಶ್ರೀರಾಮನ ಮೈಮುಟ್ಟಿ, ಪಾದಗಳಿಗೆ ನಮಸ್ಕರಿಸಿ ಕೈಗಳನ್ನು ಕಣ್ಣಿಗೊತ್ತಿಕೊಂಡು ಆನಂದಭಾಷ್ಪ ಸುರಿಸುತ್ತಾಳೆ. ಗದ್ಗದಿಸುತ್ತ ಒಳಕ್ಕೆ ಬನ್ನಿರಿ ಎನ್ನುತ್ತಾ, ಇಂದು ಏನೂ ಸಿದ್ಧತೆ ಮಾಡಿಲ್ಲ, ನಿನ್ನೆಯಷ್ಟು ಚೆನ್ನವಿಲ್ಲ ಎನ್ನುವಳು. ತನ್ನ ಮನದ ಬಯಕೆಯಂತೆ ವನಮಾಲೆಯನ್ನು ಕೊರಳಿಗೆ ಹಾಕಿ ಹಿಗ್ಗುವಳು. ಇದರಷ್ಟು ರುಚಿಯಾದ ಹಣ್ಣು ಜಗತ್ತಿನಲ್ಲಿಯೇ ಇಲ್ಲ, ನಿಮಗಾಗಿಯೇ ತಂದಿರುವೆನೆಂದು ತಾನೇ ಅವರ ಕೈಯಲ್ಲಿಡುವಳು. ಶಬರಿಯ ಉಪಚಾರದಿಂದ ರಾಮಲಕ್ಷ್ಮಣರು ಸುಪ್ರಸನ್ನರಾಗುತ್ತಾರೆ. ಹೀಗೆ ಶಬರಿ ರಾಮಲಕ್ಷ್ಮಣರನ್ನು ಉಪಚರಿಸುತ್ತಾಳೆ. | |
| 19. | ಸಿರಿಯು ರಾಜನಿಗೆ ಒಲಿದಾಗ ಆಗುವ ಅನಾಹುತಗಳಾವುವು ?<br>*ಉತ್ತರ :*<br>ದೈವಯೋಗದಿಂದ ಕೆಲವು ರಾಜರಿಗೆ ಸಿರಿಯು ಒಲಿಯುತ್ತದೆ. ಪಟ್ಟಾಭಿಷೇಕ ಕಾಲದಲ್ಲಿ ರಾಜರ ತಲೆಯ ಮೇಲೆ ಸುರಿಯುವ ಮಂಗಲಜಲ ದಯೆ-ದಾಕ್ಷಿಣ್ಯಗಳನ್ನು ತೊಳೆದುಬಿಡುತ್ತದೆ. ಹೋಮದ ಹೊಗೆಯಿಂದ ಬಗೆಯೆಲ್ಲ ಮಲಿನವಾಗುತ್ತದೆ. ದರ್ಭೆಯ ಚಿಗುರು ಕ್ಷಮಾಗುಣವನ್ನು ಒರೆಸಿಬಿಡುತ್ತದೆ. ತಲೆಗೆ ಬಿದ್ದ ಪಾವುಡದ ಎಡೆಯಲ್ಲಿ ಮುಪ್ಪಿನ ನೆನಪು ಮರೆಯಾಗುತ್ತದೆ. ಬೆಳ್ಗೊಡೆಯ ಅಡಿಯಲ್ಲಿ ಪರಲೋಕ ಕಾಣಿಸುವುದಿಲ್ಲ. ಚಾಮರದ ಗಾಳಿಯಲ್ಲಿ ದಿಟ ನುಡಿಯುವ ಬುದ್ಧಿ ತೇಲಿ ಹೋಗುತ್ತದೆ. ಕಂಚುಕಿಗಳ ಕೈಯ ಬೆತ್ತ ಕಂಡು ಸಜ್ಜನಿಕೆ ದೂರ ಸರಿಯುತ್ತದೆ. ಹೊಗಳುಭಟರ ಜಯಕಾರದಲ್ಲಿ ನಲ್ನುಡಿ ಕೇಳುವ ಕಿವಿ ಕಿವುಡಾಗುತ್ತದೆ. ತೊನೆಯುವ ವಿಜಯಧ್ವಜ ಯಶಸ್ಸನ್ನು ನಾಶಗೊಳಿಸುತ್ತದೆ. | |
| 20. | ಜನರು ಮೂರ್ತಿಪೂಜೆ ಮಾಡಲು ಕಾರಣವೇನು ?<br>*ಉತ್ತರ :*<br>ಅದೃಶ್ಯ, ಅವ್ಯಕ್ತ ಹಾಗೂ ವಿಶ್ವಚಾಲಕ ಶಕ್ತಿಯನ್ನು ನಿರ್ಗುಣ, ನಿರಾಕಾರ ರೂಪದಲ್ಲಿ ಪೂಜಿಸಲು ಎಲ್ಲರಿಂದಲೂ ಸಾಧ್ಯವಿಲ್ಲ. ಈ ವಿಶ್ವವ್ಯಾಪಿ ಶಕ್ತಿಯನ್ನು ದೃಶ್ಯರೂಪವಾಗಿ ಭಾವಿಸಿ ಮೂರ್ತಿಯನ್ನು ಜನರು ಪೂಜಿಸುತ್ತಾರೆ. ಮೂರ್ತಿ ಪೂಜೆಯೇ ಧರ್ಮದ ಜೀವಾಳವಲ್ಲ. ಮೂರ್ತಿ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಸುಂದರವಾಗಿದೆ, ಲಕ್ಷಣವಾಗಿದೆ, ಉತ್ತಮ ಕಲೆಯ ಪ್ರತೀಕ ಎಂದು ಮೂರ್ತಿ ಪೂಜೆ ಮಾಡುವುದಿಲ್ಲ. ಬದಲಾಗಿ ಒಂದು ವಿಶಿಷ್ಟ ತತ್ತ್ವ ಆ ಮೂರ್ತಿಯ ರೂಪದಲ್ಲಿ ಗೋಚರವಾಗುತ್ತದೆ. ಜನಸಾಮಾನ್ಯರಿಗೆ ವಿಶ್ವಶಕ್ತಿಯ ನಿರಾಕಾರ ಸ್ವರೂಪದ ಅರಿವು ಮೂಡಿಸಲು ಮೂರ್ತಿಪೂಜೆ ಒಂದು ಸುಲಭ ಸಾಧನವಾಗಿದೆ. ಇದಕ್ಕಾಗಿ ಮೂರ್ತಿ ಪೂಜೆಯನ್ನು ಮಾಡುತ್ತಾರೆ. | |
| 21. | ಋಣ ಹಾಗೂ ಧರ್ಮಗಳಿಗಿರುವ ಸಂಬಂಧವೇನು ? ತಿಳಿಸಿ.<br>**ಉತ್ತರ :**<br>ಭೂಮಿಯು ನಮ್ಮೆಲ್ಲರನ್ನೂ ತನ್ನ ಗುರುತ್ವದಿಂದ ಹಿಡಿದಿಟ್ಟಿದೆ. ಹಾಗೆಯೇ ಜೀವನಕ್ಕೆ ಬೇಕಾದ ಎಲ್ಲಾ ವ್ಯವಸ್ಥೆಗಳನ್ನೂ ಒಳಗೊಂಡಿದೆ. ಹಾಗಾಗಿ ನಾವು ಭೂಮಿಗೆ ಕೃತಜ್ಞರಾಗಬೇಕೆಂಬುದು ಋಣ ಪ್ರಜ್ಞೆ. ಜೀವ ಪೋಷಕ ದ್ರವ್ಯಗಳನ್ನು ಯಾರೊಬ್ಬರೂ ಪೋಲು ಮಾಡಬಾರದು. ಒಮ್ಮೆ ನಾವು ಸುತ್ತಲಿನ ಜಗತ್ತಿನ ವ್ಯವಸ್ಥೆಗೆ ಋಣಿಗಳೆಂದು ತಿಳಿದ ಬಳಿಕ, ಸಾಲದ ಹೊರೆ ಹೊತ್ತ ವ್ಯಕ್ತಿ ಅದನ್ನು ತೀರಿಸುವ ಪ್ರಯತ್ನ ಮಾಡುತ್ತಾನೆ. ಇಂಥ ಪ್ರಯತ್ನವನ್ನು ಧರ್ಮ ಎಂದು ನಮ್ಮ ಪರಂಪರೆ ಉಲ್ಲೇಖಿಸಿದೆ. | |
| 22. | ಕವಿ ದ.ರಾ. ಬೇಂದ್ರೆಯವರು ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ ?<br>**ಉತ್ತರ :**<br>ಕಾಲಪಕ್ಷಿಯ ಹಾರಾಟ ಆಕಾಶ ಭೂಮಿಯನ್ನು ವ್ಯಾಪಿಸಿಕೊಂಡಿದೆ. ನೀಲಿಯಾದ ಆಕಾಶ ಹಾಗೂ ಮೋಡ ಸಮಬಣ್ಣವನ್ನು ಹೊಂದಿದಂತೆ ತೋರುತ್ತದೆ. ಮೋಡಗಳಿಗೆ ರೆಕ್ಕೆಗಳು ಮೂಡಿ ಆಕಾಶವೇ ಹಕ್ಕಿಯಂತೆ ಹಾರುತ್ತಿದೆ ಎಂಬಂತೆ ಭಾಸವಾಗುತ್ತದೆ. ನಕ್ಷತ್ರಮಾಲೆಯನ್ನು ಕೊರಳಿಗೆ ಧರಿಸಿಕೊಂಡು, ಸೂರ್ಯ-ಚಂದ್ರರನ್ನು ಕಣ್ಣಾಗಿಸಿಕೊಂಡು ಕಾಲಪಕ್ಷಿ ಹಾರುತ್ತಿದೆ ಎಂದು ಕವಿ ದ.ರಾ. ಬೇಂದ್ರೆಯವರು ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೋಲಿಸಿದ್ದಾರೆ. | |
| 23. | ಪರಶುರಾಮನು ದ್ರೋಣರಿಗೆ ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು ?<br>**ಉತ್ತರ :**<br>ದ್ರೋಣರಿಗೆ ಬಡತನ ಬಂದಿದ್ದರಿಂದ ಪುತ್ರ ಅಶ್ವತ್ಥಾಮನೊಂದಿಗೆ ನಾಡೆಲ್ಲೆಲ್ಲಾ ಸಂಚರಿಸಿ ಪರಶುರಾಮನ ಬಳಿಗೆ ಬರುತ್ತಾರೆ. ಆ ವೇಳೆಗೆ ಪರಶುರಾಮ ನಾರುಮಡಿ ಉಟ್ಟು ಜಟಾಧಾರಿಯಾಗಿ ತಪಸ್ಸಿಗೆ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಹೋಗಲು ಸಿದ್ಧನಾಗಿದ್ದನು. ದ್ರವ್ಯಾರ್ಥಿಯಾಗಿ ಬಂದ ದ್ರೋಣರಿಗೆ ಅರ್ಘ್ಯವನ್ನು ನೀಡಲು ಚಿನ್ನದ ಪಾತ್ರೆ ಇರಲಿಲ್ಲ, ತನ್ನಲ್ಲಿದ್ದ ಎಲ್ಲಾ ಸಂಪತ್ತನ್ನು ಬೇಡಿದವರಿಗೆ, ಭೂಮಿಯನ್ನು ಗುರುಗಳಿಗೆ ನೀಡಿದ್ದರಿಂದ ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ನೀಡಿ ಸತ್ಕರಿಸುತ್ತಾನೆ. | |
| 24. | ಅಂದವಾದ ಬರವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು ?<br>**ಉತ್ತರ :**<br>ಗಾಂಧೀಜಿಯವರಿಗೆ ಇಂಗ್ಲೆಂಡಿಗೆ ಹೋಗುವವರೆಗೆ ಅಂದವಾದ ಅಕ್ಷರ, ಒಳ್ಳೆಯ ಬರವಣಿಗೆ ಶಿಕ್ಷಣದ ಆವಶ್ಯಕ ಅಂಶವಲ್ಲವೆಂಬ ಭಾವನೆಯಿತ್ತು. ದಕ್ಷಿಣ ಆಫ್ರಿಕಾಕ್ಕೆ ಹೋದ ಮೇಲೆ ಅಲ್ಲಿಯ ಸುಶಿಕ್ಷಿತ ಯುವಕರ ಮತ್ತು ವಕೀಲರ ಮುತ್ತು ಪೋಣಿಸಿದಂತೆ ಇದ್ದ ಸುಂದರ ಬರವಣಿಗೆ ನೋಡಿ ಗಾಂಧೀಜಿಯವರಿಗೆ ನಾಚಿಕೆ ಮತ್ತು ಪಶ್ಚಾತ್ತಾಪವಾಗುತ್ತದೆ. ಕೆಟ್ಟ ಅಕ್ಷರದ ಬರವಣಿಗೆ ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆ ಎಂದು ಅರಿತರು. ತಮ್ಮ ಬರವಣಿಗೆಯನ್ನು ತಿದ್ದಿಕೊಳ್ಳಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ, ಒಳ್ಳೆಯ ಬರವಣಿಗೆ ಉತ್ತಮ ಶಿಕ್ಷಣದ ಅವಶ್ಯವಾದ ಅಂಶ ಎಂಬುದನ್ನು ಪ್ರತಿಯೊಬ್ಬ ಯುವಕ-ಯುವತಿಯರು ತಿಳಿದುಕೊಳ್ಳಲಿ ಎಂಬುದು ಗಾಂಧೀಜಿಯವರ ಅಭಿಪ್ರಾಯವಾಗಿತ್ತು. | |
| 25. | ಭಗತ್‌ಸಿಂಗ್ ತನ್ನ ಉಪವಾಸದ ಕಾರಣವನ್ನು ಸಹೋದರಿಗೆ ಹೇಗೆ ತಿಳಿಸಿದನು ?<br>**ಉತ್ತರ :**<br>ಶಾಲೆಗೆ ಹೋಗಬೇಕಾಗಿದ್ದ ೧೨ ವರ್ಷದ ಬಾಲಕ ಭಗತ್‌ಸಿಂಗ್ ಅಮೃತಸರದ ಜಲಿಯನ್ ವಾಲಾಬಾಗ್‌ಗೆ ಹೋಗುತ್ತಾನೆ. ಒಂದೆಡೆ ಬಹುಕಾಲ ಅಂತರ್ಮುಖಿಯಾಗಿ ನಿಂತು, ನಂತರ ಅಲ್ಲಿದ್ದ ಮಣ್ಣನ್ನು ಹಣೆಗಿಟ್ಟುಕೊಂಡು, ಇನ್ನಷ್ಟನ್ನು ಡಬ್ಬಿಯಲ್ಲಿ ತುಂಬಿಸಿಕೊಂಡು ರಾತ್ರಿ ಮನೆಗೆ ಹಿಂದಿರುಗುತ್ತಾನೆ. ಎಂದಿನಂತೆ ಆತನ ಸಹೋದರಿ ಊಟಕ್ಕೆಬ್ಬಿಸಿದರೆ ಬೇಡ ಎಂದು ಮುಖ ತಿರುಗಿಸುತ್ತಾನೆ. ಅವನಿಗೆ ಪ್ರಿಯವಾದ ಮಾವಿನಹಣ್ಣನ್ನೂ ನಿರಾಕರಿಸುತ್ತಾನೆ. ಕಾರಣ ಕೇಳಿದಾಗ ಆಕೆಯನ್ನು ಮನೆಯ ಹಿಂಭಾಗಕ್ಕೆ ಕರೆದೊಯ್ದು, ರಕ್ತಸಿಕ್ತವಾದ ಮಣ್ಣನ್ನು ತೋರಿಸುತ್ತಾನೆ. 'ತ್ಯಾಗದ ಪ್ರತೀಕ ಆ ಮಣ್ಣು' ಎಂದು ಭಗತ್‌ಸಿಂಗ್ ಹೇಳಿದಾಗ ಆತನ ಸಹೋದರಿಗೆ ಉಪವಾಸದ ಕಾರಣ ತಿಳಿಯಿತು. | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 26. | ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಹೇಗೆ ಪರಿಹರಿಸಿಕೊಳ್ಳಲಾಯಿತು ?<br>**ಉತ್ತರ :**<br>ಪಶ್ಚಿಮ ಘಟ್ಟದ ಕಾಡುಗಳಲ್ಲಿ ತೊಡಕಲು ಕುಡಿ ಎಂಬ ಬೂದು ಬಣ್ಣದ ಗಿಡದ ಎಳೆಯ ಕುಡಿಯನ್ನು ಸಂಗ್ರಹಿಸಿ, ಒಣಗಿಸಿ ಡಬ್ಬದಲ್ಲಿ ಶೇಖರಿಸಿಡಲಾಗುತ್ತಿತ್ತು. ಒಣಗಿದ ಕುಡಿಯನ್ನು ಎಣ್ಣೆಯಲ್ಲಿ ಅದ್ದಿ ನಿತ್ಯ ಆರತಿಗೆ ಬಳಸಲಾಗುತ್ತಿತ್ತು. ನಾಗಸಂಪಿಗೆ ಬೀಜಗಳನ್ನು ಕುಟ್ಟಿ ಚಿಕ್ಕ ಚಿಕ್ಕ ಉಂಡೆಗಳನ್ನು ಕಟ್ಟಿ ಕಾರ್ತೀಕ ಮಾಸದಲ್ಲಿ ಉರಿಸಲಾಗುತ್ತಿತ್ತು. ಅಡಿಕೆ ತೋಟದಂಚಿನಲ್ಲಿ ದೊರೆಯುತ್ತಿದ್ದ ಜವಾರಿ ಹತ್ತಿಯನ್ನು ದೀಪಕ್ಕೆ ಬಳಸುವ ಪರಿಪಾಠವಿತ್ತು. ಹೀಗೆ ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಪರಿಹರಿಸಿಕೊಳ್ಳಲಾಯಿತು. | |
| 27. | ಪೈಗಳ ತಮ್ಮನ ನೂಲುಮದುವೆಯ ದಿನ ಅಂಗಳದಲ್ಲಿ ಏನೇನು ಸಿದ್ಧತೆಗಳಾಗುತ್ತಿದ್ದವು ?<br>**ಉತ್ತರ :**<br>ಮಂಗಳೂರಿನ ಗೋವಿಂದ ಪೈಗಳ ಮನೆಯಂಗಳದಲ್ಲಿ ಚಪ್ಪರ ಹಾಕಿದೆ. ಮಳೆ ಜಿನುಗುತ್ತಿತ್ತು. ಚಪ್ಪರದ ಒಂದು ಕಡೆಯಲ್ಲಿ ಲಡ್ಡುಗೆಗಳನ್ನು ಕಟ್ಟುತ್ತಾರೆ, ಮತ್ತೊಂದು ಕಡೆಯಲ್ಲಿ ಮಂಡಿಗೆಗಳನ್ನು ಮಡುಚುತ್ತಾರೆ, ಬೇರೊಂದು ಕಡೆಯಲ್ಲಿ ಸೇವಿಗೆಯನ್ನು ಒತ್ತುತ್ತಾರೆ. ಜೋಳದ ಗದ್ದೆಯಲ್ಲಿ ಗಿಳಿಗಳ ಕೋಲಾಹಲದಂತೆ ಚಪ್ಪರವೆಲ್ಲಾ ಗದ್ದಲದಿಂದ ಕೂಡಿತ್ತು. ಹೀಗೆ ಪೈಗಳ ತಮ್ಮನ ನೂಲು ಮದುವೆಯ ದಿನ ಸಿದ್ಧತೆಗಳಾಗುತ್ತಿದ್ದವು. | |
| **V.** | **ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | **2 × 3 = 6** |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿ, ಬಿರುದು / ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 28. | ಪು.ತಿ. ನರಸಿಂಹಾಚಾರ್ :<br>**ಉತ್ತರ :**<br>ಕನ್ನಡ ನವೋದಯದ ಪ್ರಮುಖ ಕವಿಗಳಲ್ಲಿ ಒಬ್ಬರಾದ 'ಪು.ತಿ.ನ.' ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್ ಸಾ.ಶ. ೧೯೦೫ ರಲ್ಲಿ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಜನಿಸಿದರು. ಕನ್ನಡ ವಿಶ್ವಕೋಶದ ಭಾಷಾಂತರಕಾರರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್-ಕನ್ನಡ ನಿಘಂಟು ಸಂಪಾದಕರಾಗಿ ಸೇವೆಸಲ್ಲಿಸಿರುವ ಇವರು ಗೀತನಾಟಕ, ಕವಿತೆ, ಸಣ್ಣಕತೆ, ಪ್ರಬಂಧ, ವಿಚಾರಸಾಹಿತ್ಯಗಳನ್ನು ರಚಿಸಿದ್ದಾರೆ. 'ಅಹಲ್ಯೆ, ಗೋಕುಲ ನಿರ್ಗಮನ, ಶಬರಿ, ವಿಕಟಕವಿವಿಜಯ, ಹಂಸದಮಯಂತಿ ಮತ್ತು ಇತರ ರೂಪಕಗಳು, ಹಣತೆ, ರಸಸರಸ್ವತಿ, ಗಣೇಶದರ್ಶನ, ಶಾರದಯಾಮಿನಿ, ಶ್ರೀಹರಿಚರಿತೆ, ರಥಸಪ್ತಮಿ' ಇವರ ಪ್ರಮುಖ ಕೃತಿಗಳಾಗಿವೆ. 'ಹಂಸದಮಯಂತಿ ಮತ್ತು ಇತರ ರೂಪಕಗಳು' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ಶ್ರೀಹರಿಚರಿತೆ' ಕಾವ್ಯಕ್ಕೆ ಪಂಪಪ್ರಶಸ್ತಿ ಲಭಿಸಿದೆ. ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಿ.ಲಿಟ್. ಪದವಿ ನೀಡಿ ಗೌರವಿಸಿದೆ. ಚಿಕ್ಕಮಗಳೂರಿನಲ್ಲಿ ೧೯೮೧ ರಲ್ಲಿ ಸಮಾವೇಶಗೊಂಡ ೫೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. | |
| 29. | ರನ್ನ :<br>**ಉತ್ತರ :**<br>ಕನ್ನಡದ ಕವಿ ರತ್ನತ್ರಯರಲ್ಲಿ ಒಬ್ಬನಾದ ರನ್ನ ಕವಿಯ ಕಾಲ ಸಾ.ಶ. ಸುಮಾರು ೯೪೯ (ಹತ್ತನೆಯ ಶತಮಾನ). ಇವನು ಬಾಗಲಕೋಟೆ ಜಿಲ್ಲೆಯ ಮುದುವೊಳಲು (ಈಗಿನ ಮುಧೋಳ) ಎಂಬ ಗ್ರಾಮದಲ್ಲಿ ಜನಿಸಿದನು. ಈತನ ತಂದೆ ಜಿನವಲ್ಲಭ, ತಾಯಿ ಅಬ್ಬಲಬ್ಬೆ. ಈತನು ಚಾಲುಕ್ಯರ ದೊರೆಯಾದ ತೈಲಪನ ಆಸ್ಥಾನದಲ್ಲಿದ್ದನು. ಇವನು 'ಸಾಹಸ ಭೀಮ ವಿಜಯಂ (ಗದಾಯುದ್ಧ)', 'ಅಜಿತತೀರ್ಥಂಕರ ಪುರಾಣತಿಲಕಂ', 'ಪರಶುರಾಮಚರಿತಂ', 'ಚಕ್ರೇಶ್ವರಚರಿತಂ' ಎಂಬ ಕಾವ್ಯಗಳನ್ನು ಬರೆದಿದ್ದಾನೆ. 'ರನ್ನಕಂದ' ಎಂಬ ನಿಘಂಟನ್ನು ಬರೆದಿರುವುದಾಗಿ ತಿಳಿದುಬರುತ್ತದೆ. ಈತನಿಗೆ ತೈಲಪನು 'ಕವಿಚಕ್ರವರ್ತಿ' ಎಂಬ ಬಿರುದನ್ನು ನೀಡಿ ಗೌರವಿಸಿದ್ದಾನೆ. | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **VI.** | **ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :** | **1 × 3 = 3** |
| | ಪ್ರಸ್ತಾರ ಹಾಕುವುದು | 1 ಅಂಕ |
| | ಗಣ ವಿಭಾಗಿಸುವುದು | 1 ಅಂಕ |
| | ಛಂದಸ್ಸಿನ ಹೆಸರು ಬರೆಯುವುದು | 1 ಅಂಕ |
| | ಒಟ್ಟು | 3 ಅಂಕಗಳು |

30. ನರಕಿಯಾವನು ಸುಜನರಲಿ ಬಾ

ಹಿರನದಾವನು ಲೋಕವರಿಯಲು

ಹರಣವಿರೆ ಹೊಂದಿದನದಾವನು ಭೂಮಿಪಾಲರಲಿ

| ೩ | ೪ | ೩ | ೪ | |
|---|---|---|---|---|
| U U U | — U U | U U U | U U — | |
| ನರಕಿ | ಯಾವನು | ಸುಜನ | ರಲಿ ಬಾ | = ೧೪ |

| ೩ | ೪ | ೩ | ೪ | |
|---|---|---|---|---|
| U U U | — U U | — U | U U U U | |
| ಹಿರನ | ದಾವನು | ಲೋಕ | ವರಿಯಲು | = ೧೪ |

| ೩ | ೪ | ೩ | ೪ | ೩ | ೪ | ೨ | |
|---|---|---|---|---|---|---|---|
| U U U | U U — | U U U | — U U | — U | — U U | — | |
| ಹರಣ | ವಿರೆ ಹೊಂ | ದಿದನ | ದಾವನು | ಭೂಮಿ | ಪಾಲರ | ಲಿ | = ೨೩ |

ಛಂದಸ್ಸು : ಇದು ಮಾತ್ರಾಗಣಾಧಾರಿತ 'ಭಾಮಿನಿ' ಷಟ್ಪದಿಯ ಲಕ್ಷ್ಯವಾಗಿದೆ.

| | | |
|---|---|---|
| **VII.** | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | **1 × 3 = 3** |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಬರೆಯುವುದು | 1 ಅಂಕ |
| | ಅಂಶಗಳನ್ನು ಗುರುತಿಸಿ, ಸಮನ್ವಯಿಸುವುದು | 1 ಅಂಕ |
| | ಒಟ್ಟು | 3 ಅಂಕಗಳು |

31. "ಸೀತೆಯ ಮುಖ ಕಮಲದಂತೆ ಅರಳಿತು"

***ಉತ್ತರ :***

ಅಲಂಕಾರದ ಹೆಸರು : ಉಪಮಾಲಂಕಾರ

ಲಕ್ಷಣ : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.

ಸಮನ್ವಯ : ಉಪಮೇಯ : ಸೀತೆಯ ಮುಖ

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಉಪಮಾನ : ಕಮಲ<br>ಉಪಮಾವಾಚಕ ಪದ : ಅಂತೆ<br>ಸಮಾನಧರ್ಮ : ಅರಳುವುದು<br>ಇಲ್ಲಿ ಉಪಮೇಯವಾದ 'ಸೀತೆಯ ಮುಖ' ವನ್ನು ಉಪಮಾನವಾದ 'ಕಮಲಕ್ಕೆ' ಹೋಲಿಸಲಾಗಿದೆ. 'ಅಂತೆ' ಎಂಬ ಉಪಮಾವಾಚಕ ಪದವಿದ್ದು, 'ಅರಳುವುದು' ಎಂಬ ಸಮಾನಧರ್ಮ ಇರುವುದರಿಂದ ಇದು ಪೂರ್ಣೋಪಮಾಲಂಕಾರ (ಉಪಮಾಲಂಕಾರ) ದ ಲಕ್ಷ್ಯವಾಗಿದೆ. | |
| **VIII.** | **ಗಾದೆಯನ್ನು ವಿಸ್ತರಿಸಿ ಬರೆಯುವುದು :** | **1 × 3 = 3** |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ-ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 32. | ಹಣಕ್ಕಿಂತ ಗುಣ ಮೇಲು.<br>**ಅಥವಾ**<br>ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ. | |
| **IX.** | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | **6 × 3 = 18** |
| | ಕರ್ತೃ, ಆಕರ ಮತ್ತು ಪಠ್ಯದ ಹೆಸರು | 1 ಅಂಕ |
| | ಸಂದರ್ಭದ ವಿವರಣೆ | 1 ಅಂಕ |
| | ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 33. | "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ."<br>**ಉತ್ತರ :**<br>**ಆಯ್ಕೆ :** ಪ್ರಸ್ತುತ ವಾಕ್ಯವನ್ನು ವಿ.ಕೃ. ಗೋಕಾಕ್ ಅವರು ರಚಿಸಿರುವ 'ಸಮುದ್ರದಾಚೆಯಿಂದ' ಎಂಬ ಪ್ರವಾಸಕಥನದಿಂದ ಆಯ್ದ 'ಲಂಡನ್ ನಗರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>**ಸಂದರ್ಭ :** ಲೇಖಕರು ಲಂಡನ್ ನಗರಕ್ಕೆ ಪ್ರವಾಸ ಕೈಗೊಂಡಿದ್ದರು. ಅಲ್ಲಿನ ಸೌಂದರ್ಯ, ಜೀವನಶೈಲಿ, ಪ್ರಾರ್ಥನಾಮಂದಿರ ಹಾಗೂ ಅಲ್ಲಿದ್ದ ಮಹಾಪುರುಷರ ಸ್ಮಾರಕಗಳನ್ನು ನೋಡಿ | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ತಮ್ಮ ಅನುಭವಗಳನ್ನು ದಾಖಲಿಸುತ್ತಾರೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ವಿಶೇಷ ಗೌರವ ನೀಡಲಾಗಿದೆ. ಪ್ರವಾಸದಿಂದ ವೈವಿಧ್ಯಮಯ ದರ್ಶನವಾಗುತ್ತದೆ. ಅನುಭವ ಹೆಚ್ಚುತ್ತದೆ. ಮನಸ್ಸು ವಿಕಾಸವಾಗುತ್ತದೆ. ದೃಷ್ಟಿ ವಿಶಾಲವಾಗುತ್ತದೆ ಎಂದು ಯೋಚಿಸುತ್ತಾ, ಬೇಕನ್ ಹೇಳಿದ ಮಾತನ್ನು ಸ್ಮರಿಸುತ್ತಾ ಮೇಲಿನ ಮಾತನ್ನು ಹೇಳಿದ್ದಾರೆ. | |
| | **ಸ್ವಾರಸ್ಯ :** 'ದೇಶ ಸುತ್ತು ಕೋಶ ಓದು' ಎಂಬ ಮಾತಿನಂತೆ ಪ್ರವಾಸವು ಲೋಕಾನುಭವ, ಜ್ಞಾನ ಸಂಪಾದನೆಯೊಂದಿಗೆ ಭೌಗೋಳಿಕ ಹಾಗೂ ಸಾಂಸ್ಕೃತಿಕ ವೈವಿಧ್ಯತೆಯನ್ನು ಅರಿಯಲು ಸಹಕಾರಿಯಾಗಿದೆ ಎಂಬುದು ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ. | |
| 34. | "ತಾವು ಕಡಿಮೆ ಮಾತನಾಡಿದ್ದೀರಿ ; ಹೆಚ್ಚು ಕೆಲಸ ಮಾಡಿದ್ದೀರಿ." | |
| | **ಉತ್ತರ :** | |
| | **ಆಯ್ಕೆ :** ಪ್ರಸ್ತುತ ವಾಕ್ಯವನ್ನು ಡಿ.ಎಸ್. ಜಯಪ್ಪಗೌಡ ರಚಿಸಿರುವ 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಕೃತಿಯಿಂದ ಆಯ್ದ 'ಭಾಗ್ಯಶಿಲ್ಪಿಗಳು' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | **ಸಂದರ್ಭ :** ಬೆಂಗಳೂರಿನಲ್ಲಿ ನಡೆದ ಸರ್ ಎಂ. ವಿಶ್ವೇಶ್ವರಯ್ಯನವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಜವಾಹರಲಾಲ್ ನೆಹರೂ ಅವರು 'ಭಾರತೀಯರು ಹೆಚ್ಚು ಮಾತನಾಡುತ್ತಾರೆ, ನುಡಿದಂತೆ ನಡೆಯುವುದಿಲ್ಲ ಎಂಬ ದೂಷಣೆಯಿದೆ. ಆದರೆ ನೀವು ಈ ಮಾತಿಗೆ ಹೊರತಾಗಿದ್ದೀರಿ. ಕಡಿಮೆ ಮಾತನಾಡಿ ಹೆಚ್ಚು ಕೆಲಸ ಮಾಡಿದ್ದೀರಿ. ಇದನ್ನು ನಿಮ್ಮಿಂದ ಕಲಿಯಬೇಕಾಗಿದೆ' ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ. | |
| | **ಸ್ವಾರಸ್ಯ :** 'ಮಾತಿಗಿಂತ ಕೃತಿ ಲೇಸು' ಎಂಬಂತೆ ವಿಶ್ವೇಶ್ವರಯ್ಯನವರು ಮಿತಭಾಷಿಯಾಗಿದ್ದು, ಸಾಧನೆಯ ಮೂಲಕವೇ ಮಾತನಾಡುತ್ತಿದ್ದರು ಎಂಬುದು ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ. | |
| 35. | "ಓಹೋ, ನನಗೇ ಗುಡಿಮನೆ ಕಟ್ತಾ ಇದ್ದೀರೋ ?" | |
| | **ಉತ್ತರ :** | |
| | **ಆಯ್ಕೆ :** ಪ್ರಸ್ತುತ ವಾಕ್ಯವನ್ನು ದೇವನೂರ ಮಹಾದೇವ ವಿರಚಿತ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | 'ಎದೆಗೆ ಬಿದ್ದ ಅಕ್ಷರ' ಎಂಬ ವೈಚಾರಿಕ ಲೇಖನಗಳ ಸಂಕಲನದಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | **ಸಂದರ್ಭ :** ಒಮ್ಮೆ ಗ್ರಾಮದ ಜನರೆಲ್ಲ ಸೇರಿ ಮಂಚಮ್ಮ ದೇವಿಗೆ ಗುಡಿಕಟ್ಟಲು ಪ್ರಾರಂಭಿಸುತ್ತಾರೆ. ಗುಡಿ ಚಾವಣಿ ಮಟ್ಟಕ್ಕೆ ಬರುತ್ತಿದ್ದಂತೆ ಒಬ್ಬನ ಮೇಲೆ ದೇವಿ ಆವಾಹಿಸಿಕೊಂಡು 'ನಿಲ್ಲಿಸಿ, ಏನು ಮಾಡ್ತಾ ಇದ್ದೀರಿ ?' ಎಂದು ಅಬ್ಬರಿಸುತ್ತಾಳೆ. ಅಲ್ಲಿದ್ದ ಒಬ್ಬ 'ನಿನಗೊಂದು ಗುಡಿಮನೆ ಕಟ್ಟುತ್ತಿದ್ದೇವೆ' ಎಂದಾಗ ದೇವಿ ಜನರನ್ನು ಕುರಿತು ಮೇಲಿನ ಮಾತನ್ನು ಹೇಳುತ್ತಾಳೆ. | |
| | **ಸ್ವಾರಸ್ಯ :** ಭಕ್ತರ ಬಗ್ಗೆ ಕಳಕಳಿ, ವಾತ್ಸಲ್ಯ ಹೊಂದಿದ್ದ ದೇವಿ ಸದಾ ಭಕ್ತರ ಒಳಿತನ್ನೇ ಬಯಸುತ್ತಿದ್ದಳು. ತನ್ನ ಎಲ್ಲಾ ಭಕ್ತರಿಗೂ ಸೂರಿಲ್ಲ ಎಂಬುದನ್ನು ಅರಿತು, ಅಗತ್ಯವಿರುವವರಿಗೆ ಮನೆಕಟ್ಟಲಿ. ನನಗೆ ಅವಶ್ಯಕತೆಯಿಲ್ಲ ಎಂಬ ಕಾರುಣ್ಯ, ಸಮಾನತೆ, ಭಕ್ತವಾತ್ಸಲ್ಯ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ. | |
| 36. | "ತೇಲಿಸಿ ಮುಳುಗಿಸಿ ಖಂಡ-ಖಂಡಗಳ" | |
| | **ಉತ್ತರ :** | |
| | **ಆಯ್ಕೆ :** ಪ್ರಸ್ತುತ ವಾಕ್ಯವನ್ನು ದ.ರಾ. ಬೇಂದ್ರೆ ವಿರಚಿತ 'ಗರಿ' ಕವನ ಸಂಕಲನದಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | **ಸಂದರ್ಭ :** ನಿಸರ್ಗದ ಹೊಂದಾಣಿಕೆಯಂತೆ ಕಾಲ ಉರುಳುತ್ತದೆ. ಆಯಾ ಕಾಲದಲ್ಲಿ ನಡೆದ ಎಲ್ಲಾ ಘಟನೆಗಳು ಇತಿಹಾಸವಾಗುತ್ತ ಹೋಗುತ್ತದೆ. ಕಾಲದ ಗತಿಯನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿದ್ದಾರೆ. ಕಾಲ ತನ್ನ ಪಯಣದಲ್ಲಿ ದೊಡ್ಡ ದೊಡ್ಡ ಸಾಮ್ರಾಜ್ಯಗಳನ್ನು, ಸಣ್ಣ ಸಣ್ಣ ಮಂಡಲಗಳನ್ನು ಹುಟ್ಟಿಸಿ, ಅದರ ಫಸಲನ್ನು ಕೊಯ್ಲು | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಮಾಡಿದೆ. ಅನೇಕ ಖಂಡಗಳನ್ನು ತೇಲಿಸಿ ಮುಳುಗಿಸಿದೆ. ನಾನೇ ಚಕ್ರಾಧಿಪತಿ, ಸಾರ್ವಭೌಮ ಎಂದು ಮೆರೆದವರ ನೆತ್ತಿಯನ್ನು ಕುಕ್ಕಿದೆ ಎಂದು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.<br>**ಸ್ವಾರಸ್ಯ :** 'ಕಾಲಾಯ ತಸ್ಮೈ ನಮಃ' ಎಂಬಂತೆ ಕಾಲಕ್ಕೆ ಅತೀತರಾದವರು ಯಾರು ಇಲ್ಲ. ಎಷ್ಟೇ ಪ್ರಭಾವಶಾಲಿಯಾದರೂ ಕಾಲಚಕ್ರದ ಎದುರಿನಲ್ಲಿ ತಲೆಬಾಗಲೇಬೇಕು, ಹೊಂದಿಕೊಳ್ಳಲೇಬೇಕು ಎಂಬುದು ಇಲ್ಲಿಯ ಸ್ವಾರಸ್ಯವಾಗಿದೆ. | |
| 37. | "ವಿಲಾತಿಯಿಂದ ಹುಕುಮು ಕಳಿಸಿತು ಕುಂಪಣಿ ಸರಕಾರ"<br>**ಉತ್ತರ :**<br>**ಆಯ್ಕೆ :** ಪ್ರಸುತ್ತ ವಾಕ್ಯವನ್ನು ಡಾ. ಬಿ.ಎಸ್. ಗದ್ದಗಿಮಠ ಅವರು ಸಂಪಾದಿಸಿದ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದ 'ಹಲಗಲಿ ಬೇಡರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>**ಸಂದರ್ಭ :** ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಭಾರತೀಯರ ಮೇಲೆ ನಿಶ್ಶಸ್ತ್ರೀಕರಣದ ಕಾಯಿದೆಯನ್ನು ಹೇರಲಾಯಿತು. ಈ ಕಾಯಿದೆಯ ಪ್ರಕಾರ ಭಾರತಿಯರು ಬ್ರಿಟಿಷ್ ಸರ್ಕಾರದ ಅನುಮತಿಯಿಲ್ಲದೆ ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ. ಈಗಾಗಲೇ ಶಸ್ತ್ರಾಸ್ತ್ರ ಹೊಂದಿರುವವರು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕಾಗಿತ್ತು. ಸ್ವಾತಂತ್ರ್ಯ ಪ್ರಿಯರಾಗಿದ್ದ ಹಲಗಲಿ ಬೇಡರು ತಮ್ಮ ಜೀವನಾಧಾರವಾಗಿದ್ದ ಆಯುಧಗಳನ್ನು ಕೊಡಲೊಪ್ಪದೆ ಬ್ರಿಟಿಷರ ವಿರುದ್ಧ ದಂಗೆ ಎದ್ದಾಗ ಬ್ರಿಟಿಷ್ ಸರ್ಕಾರ ಆದೇಶ ಮಾಡುವ ಸಂದರ್ಭವನ್ನು ಲಾವಣಿಕಾರ ಮೇಲಿನಂತೆ ಹೇಳಿದ್ದಾನೆ.<br>**ಸ್ವಾರಸ್ಯ :** ಸ್ವಾತಂತ್ರ್ಯ ಸಂಗ್ರಾಮದ ನಂತರದಲ್ಲಿ ಭಾರತೀಯರ ಸ್ವಾತಂತ್ರ್ಯ ಹೋರಾಟವನ್ನು ಹತ್ತಿಕ್ಕಲು ಬ್ರಿಟಿಷರು ಹಲವಾರು ಕಾಯಿದೆಗಳನ್ನು ಜಾರಿಗೆ ತಂದರು. ಈ ಮೂಲಕ ಹೋರಾಟಗಾರರನ್ನು ಹಿಮ್ಮೆಟ್ಟಿಸಬಹುದು ಎಂದು ತಿಳಿದು ನಿರಂತರ ಶೋಷಣೆ, ದಬ್ಬಾಳಿಕೆ ಎಸಗುತ್ತಿದ್ದರು ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ. | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 38. | "ಬೇರೆ ಬಣ್ಣವನೆ ಕಾಣೆ"<br>**ಉತ್ತರ :**<br>**ಆಯ್ಕೆ :** ಪ್ರಸ್ತುತ ವಾಕ್ಯವನ್ನು ಕುವೆಂಪು ಅವರು ರಚಿಸಿರುವ 'ಪಕ್ಷಿಕಾಶಿ' ಕವನಸಂಕಲನದಿಂದ ಆಯ್ದ 'ಹಸುರು' ಎಂಬ ಪದ್ಯಪಾಠದಿಂದ ಆರಿಸಲಾಗಿದೆ.<br>**ಸಂದರ್ಭ :** ನವರಾತ್ರಿಯ ಸಂದರ್ಭದಲ್ಲಿ ಮಲೆನಾಡಿನ ತುಂಬಾ ಎಲ್ಲಿ ನೋಡಿದರೂ ಹಸುರು ವ್ಯಾಪಿಸಿಕೊಂಡಿರುತ್ತದೆ. ಕವಿಗೆ ಆಗಸ, ಮುಗಿಲು, ಗದ್ದೆ, ಮಲೆ, ಕಣಿವೆ ಹಾಗೂ ಸಂಜೆಯ ಬಿಸಿಲೂ ಹಸುರಾಗಿಯೇ ಕಾಣುತ್ತದೆ. ಹಚ್ಚಹಸುರಾದ ಹುಲ್ಲುಗಾವಲು ಇಡೀ ಭೂಮಿಗೆ ಹಸುರು ಜಮಖಾನೆಯನ್ನು ಹಾಸಿದಂತೆ ತೋರುತ್ತದೆ. ಭೂಮಿಯಲ್ಲಿ ಹಸುರು ಬಿಟ್ಟು ಬೇರೆ ಏನೂ ಕಾಣುತ್ತಿಲ್ಲ ಎಂಬುದನ್ನು ಕವಿ ಮೇಲಿನಂತೆ ಹೇಳಿದ್ದಾರೆ.<br>**ಸ್ವಾರಸ್ಯ :** ಆಶ್ವಯುಜ ಮಾಸದ ನವರಾತ್ರಿಯ ಸಂದರ್ಭದಲ್ಲಿ ಮಲೆನಾಡಿನ ತುಂಬೆಲ್ಲಾ ಹಸುರು ವ್ಯಾಪಿಸಿದೆ. ಪ್ರಕೃತಿ ಹಾಗೂ ಕವಿ ಹೊಂದಿದ್ದ ನಿಕಟ ಸಂಬಂಧ, ಕವಿ ಹಾಗೂ ಪ್ರಕೃತಿ ಒಂದಾಗುವ ಕಾವ್ಯದ ಅದ್ವೈತ ಸ್ಥಿತಿ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ. | |
| **X.** | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)** | **1 × 4 = 4** |
| 39. | ಮಾರಿಗೌತಣವಾಯ್ತು ನಾಳಿನ<br>..................................................................<br>..................................................................<br>..................................................................<br>..................................................................<br>ವೀರರೈವರ ನೋಯಿಸೆನು ರಾಜೀವಸಖನಾಣೆ<br>**ಅಥವಾ** | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಕೊರಳ ಸೆರೆ ಹಿಗ್ಗಿದವು ದೃಗುಜಲ<br>.......................................................................<br>.......................................................................<br>.......................................................................<br>.......................................................................<br>ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ | |
| | **ಉತ್ತರ :**<br>ಮಾರಿಗೌತಣವಾಯ್ತು ನಾಳಿನ<br>ಭಾರತವು ಚತುರಂಗ ಬಲದಲಿ<br>ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು<br>ತೀರಿಸಿಯೆ ಪತಿಯವಸರಕ್ಕೆ ಶ<br>ರೀರವನು ನೂಕುವೆನು ನಿನ್ನಯ<br>ವೀರರೈವರ ನೋಯಿಸೆನು ರಾಜೀವಸಖನಾಣೆ<br>**ಅಥವಾ**<br>ಕೊರಳ ಸೆರೆ ಹಿಗ್ಗಿದವು ದೃಗುಜಲ<br>ಉರವಣಿಸಿ ಕಡು ನೊಂದನಕಟಾ<br>ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ<br>ಹರಿಯ ಹಗೆ ಹೊಗೆದೋರದುರುಹದೆ<br>ಬರಿದೆ ಹೋಹುದೆ ತನ್ನ ವಂಶವ<br>ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ | |
| **XI.** | **ಪದ್ಯಭಾಗವನ್ನು ಓದಿ, ಅರ್ಥಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :** | **1 × 4 = 4** |
| | ವಿಷಯಾಂಶಕ್ಕೆ | 3 ಅಂಕಗಳು |
| | ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 40. | ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ ।<br>ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್ ।<br>ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು ॥<br>ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ ।<br>ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ ।<br>ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು ॥ | |

| ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|
| ಉತ್ತರ :<br>ಪ್ರಸ್ತುತ ಪದ್ಯಭಾಗವನ್ನು ಲಕ್ಷ್ಮೀಶ ಕವಿ ಬರೆದ 'ವೀರಲವ' ಎಂಬ ಪದ್ಯಪಾಠದಿಂದ ಆರಿಸಲಾಗಿದೆ. ಶ್ರೀರಾಮನ ಅಶ್ವಮೇಧಯಾಗದ ಕುದುರೆ ದೇಶ ದೇಶಗಳನ್ನು ಸುತ್ತಿ ವಾಲ್ಮೀಕಿ ಆಶ್ರಮದ ಕಡೆಗೆ ಬರುತ್ತದೆ. ಒಡನಾಡಿಗಳ ಜೊತೆಯಲ್ಲಿ ಆಟವಾಡುತ್ತಿದ್ದ ಲವ ಕುದುರೆಯನ್ನು ನೋಡಿ ಅದರ ಬಳಿಗೆ ಬರುತ್ತಾನೆ. ಕುದುರೆಯ ನೆತ್ತಿಯ ಮೇಲಿದ್ದ ಫಲಕದಲ್ಲಿ ಬರೆಯಲಾಗಿದ್ದ ಲಿಖಿತವನ್ನು ಓದಿ ಕೋಪಗೊಂಡು ರಾಮನ ಗರ್ವವನ್ನು ಬಿಡಿಸದೇ ಇದ್ದರೆ ತನ್ನ ಮಾತೆಯನ್ನು ಸರ್ವಜನರು ಬಂಜೆಯೆನ್ನದೆ ಇರುವರೆ ? ಎಂದು ತನ್ನ ಉತ್ತರೀಯವನ್ನು ಹುರಿ ಮಾಡಿ ಕುದುರೆಯ ಕೊರಳಿಗೆ ಬಿಗಿದು ಬಾಳೆಯ ಗಿಡಕ್ಕೆ ಕಟ್ಟುತ್ತಾನೆ. ಇದನ್ನು ಗಮನಿಸಿದ ಮುನಿಸುತರು ಲವನಿಗೆ 'ಬೇಡ ಬೇಡ ಕುದುರೆಯನ್ನು ಕಟ್ಟಬೇಡ ಇದು ಅರಸರ ಕುದುರೆ. ಅವರಿಗೆ ತಿಳಿದರೆ ನಮ್ಮನ್ನು ಹೊಡೆಯುತ್ತಾರೆ' ಎಂದಾಗ ನೀವು ಬ್ರಾಹ್ಮಣರ ಮಕ್ಕಳು ಹೆದರುತ್ತೀರಿ, ನಾನು ಜಾನಕಿಯ ಮಗ ಹೆದರುವುದಿಲ್ಲ, ನಿಮಗೆ ಭಯವಾದರೆ ಇಲ್ಲಿಂದ ಹೊರಟು ಹೋಗಿ ಎಂದು ಹೇಳುತ್ತಾ ತನ್ನ ಬಿಲ್ಲಿನ ಹೆದೆ ಏರಿಸಿ ಯುದ್ಧಕ್ಕೆ ಸನ್ನದ್ಧನಾಗಿ ನಿಲ್ಲುತ್ತಾನೆ.<br>'ಹುಟ್ಟು ಗುಣ ಘಟ್ಟ ಹತ್ತಿದರೂ ಹೋಗದು' ಎಂಬ ಮಾತಿನಂತೆ ಲವಕುಶರು ರಾಜಮನೆತನಕ್ಕೆ ಸೇರಿದವರಾದರೂ ವಾಲ್ಮೀಕಿ ಮುನಿಯ ಆಶ್ರಮದಲ್ಲಿ ಹುಟ್ಟಿ ಬೆಳೆಯುತ್ತಾರೆ. 'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬಂತೆ ಬಾಲ್ಯದಿಂದಲೇ ಧೈರ್ಯ, ಸಾಹಸವನ್ನು ರೂಢಿಸಿಕೊಂಡಿದ್ದರು. ಸಹಜ ಕ್ಷಾತ್ರಗುಣ, ಬಾಲ್ಯ ಸಹಜ ಗುಣ ಹಾಗೂ ವೀರತೆಯಿಂದ ಕುದುರೆಯನ್ನು ಕಟ್ಟಿಹಾಕುತ್ತಾನೆ. ಕಷ್ಟ ಸವಾಲುಗಳು ಬಂದಾಗ ಎದೆಗುಂದದೆ ಚಿಕ್ಕವರು, ಅಸಮರ್ಥರು ಎಂದು ಕೂರದೆ ಎದುರಿಸುವ ಗುಣ, ತಾಯಿಯ ಮೇಲಿದ್ದ ಗೌರವ, ಸಾಹಸ ಪ್ರವೃತ್ತಿ, ಸ್ವಾಭಿಮಾನ ಹಾಗೂ ಮುನಿಸುತರ ಭಯದ ಗುಣಗಳು ಈ ಪದ್ಯಭಾಗದಲ್ಲಿ ಅಡಕವಾಗಿರುವ ಮೌಲ್ಯಗಳಾಗಿವೆ. | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| XII. | ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು : | 2 × 4 = 8 |
| | ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 41. | ದುಷ್ಟಬುದ್ಧಿಯ ತಂತ್ರ ಆತನಿಗೆ ತಿರುಗುಬಾಣವಾದ ಬಗೆಯನ್ನು ಕುರಿತು ಬರೆಯಿರಿ.<br>**ಅಥವಾ**<br>ದುಷ್ಟಬುದ್ಧಿ ಹಾಗೂ ಧರ್ಮಬುದ್ಧಿ ಧರ್ಮಾಧಿಕರಣರ ಬಳಿಗೆ ಬರಲು ಕಾರಣವೇನು ? ವಿವರಿಸಿ.<br>**ಉತ್ತರ :**<br>ದುಷ್ಟಬುದ್ಧಿ ಧರ್ಮಬುದ್ಧಿಗೆ ವಂಚಿಸಿ ಹೂತಿಟ್ಟ ಹೊನ್ನನ್ನೆಲ್ಲ ತಾನೇ ಕದ್ದುಕೊಂಡು ಧರ್ಮಬುದ್ಧಿಯ ಮೇಲೆ ಆರೋಪ ಮಾಡುತ್ತಾನೆ. ನ್ಯಾಯ ತೀರ್ಮಾನಕ್ಕಾಗಿ ಧರ್ಮಾಧಿಕರಣರ ಬಳಿಗೆ ಬಂದ ಇಬ್ಬರೂ ನಡೆದ ಘಟನೆಯನ್ನು ತಿಳಿಸುತ್ತಾರೆ. ಹೊನ್ನನ್ನೆಲ್ಲ ಧರ್ಮಬುದ್ಧಿಯೇ ಕದ್ದುಕೊಂಡಿರುವುದಕ್ಕೆ ಅಲ್ಲಿರುವ ವಟವೃಕ್ಷವೇ ಸಾಕ್ಷಿ ಎಂದು ದುಷ್ಟಬುದ್ಧಿ ಹೇಳುತ್ತಾನೆ. ಧರ್ಮಾಧಿಕರಣರಿಗೆ ವಿಸ್ಮಯವಾಗುತ್ತದೆ. ಧರ್ಮಬುದ್ಧಿಗೆ ಈ ಸಾಕ್ಷಿಯನ್ನು ಸ್ವೀಕರಿಸಲು ಸೂಚಿಸುತ್ತಾರೆ. ಮನುಷ್ಯರ ಸುಕೃತ ದುಷ್ಕೃತಗಳು ದೇವರಿಗೆ ತಿಳಿದಿರುತ್ತವೆಯೆಂದು ಧರ್ಮಬುದ್ಧಿ ಸಾಕ್ಷಿಯನ್ನು ಒಪ್ಪುತ್ತಾನೆ. ಮರುದಿನ ಬೆಳಗ್ಗೆ ಸಾಕ್ಷಿ ಕೇಳಲು ಸಮಯ ನಿಗದಿಯಾಗುತ್ತದೆ. ಮನೆಗೆ ಬಂದ ದುಷ್ಟಬುದ್ಧಿ ತನ್ನ ತಂದೆಯನ್ನು ಸಾಕ್ಷಿ ಹೇಳುವಂತೆ ಒಪ್ಪಿಸಿ ರಾತ್ರಿಯೇ ಮರದ ಪೊಟರೆಯೊಳಗೆ ಕೂರಿಸಿ ಬರುತ್ತಾನೆ. ಮರುದಿನ ಸಾಕ್ಷಿ ಕೇಳಲು ಧರ್ಮಾಧಿಕರಣರು ಮರದ ಬಳಿಗೆ ಬಂದು ಅಷ್ಟವಿಧಾರ್ಚನೆ ಮಾಡಿ ಸತ್ಯವನ್ನೇ ಹೇಳಬೇಕು ಎಂದು ಮರವನ್ನು ಪ್ರಾರ್ಥಿಸುತ್ತಾರೆ. ಮರದ ಪೊಟರೆಯಲ್ಲಿ ಅಡಗಿದ್ದ ಪ್ರೇಮಮತಿ ಮತಿಗೆಟ್ಟು ಅಧರ್ಮದಿಂದ 'ಧರ್ಮಬುದ್ಧಿಯೇ ಹೊನ್ನನ್ನೆಲ್ಲ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಕದ್ದಿರುವನು' ಎಂದನು. ನೆರೆದ ಎಲ್ಲರಿಗೂ ಆಶ್ಚರ್ಯವಾಯಿತು. ದೇವರೇ ಆಗಿದ್ದರೆ ಸತ್ಯವನ್ನು ನುಡಿಯಬೇಕಿತ್ತು. ಇದರಲ್ಲಿ ಏನೋ ಮೋಸವಿದೆ ಎಂದು ಧರ್ಮಬುದ್ಧಿ ಮರವನ್ನು ಬಲವಂದು ಬಂದು ನೋಡಿದಾಗ ಮರದಲ್ಲಿನ ದೊಡ್ಡ ಪೊಟರೆ, ಅದರ ಬಳಿಯಲ್ಲಿ ಮನುಷ್ಯ ಸಂಚಾರವಾಗಿರುವುದನ್ನು ಗಮನಿಸುತ್ತಾನೆ. 'ಉಪಾಯ ಬಲ್ಲವನಿಗೆ ಅಪಾಯವಿಲ್ಲ' ಎಂಬಂತೆ ಧರ್ಮಾಧಿಕರಣರನ್ನು ಕುರಿತು 'ಹುಸಿಯದ ಬೇಹಾರಿಯೇ ಇಲ್ಲ . ನಾನು ಹೊನ್ನನ್ನು ಕದ್ದುಕೊಂಡು ಹೋಗಲು ಬಂದಾಗ ಸೂರ್ಯೋದಯವಾಯಿತು. ವಿಧಿಯಿಲ್ಲದೆ ಇದೇ ಮರದ ಪೊಟರೆಯೊಳಗೆ ಇಟ್ಟಿದ್ದೆ. ಮರುದಿನ ಬಂದು ನೋಡಿದಾಗ ಹೊನ್ನನ್ನು ಸರ್ಪವೊಂದು ಸುತ್ತಿಕೊಂಡಿತ್ತು. ತೆಗೆದುಕೊಳ್ಳಲಾಗದೆ ಇಲ್ಲಿಯೇ ಬಿಟ್ಟಿದ್ದೇನೆ. ಈಗ ನಿಮ್ಮೆಲ್ಲರ ಎದುರಿನಲ್ಲಿ ಪೊಟರೆಯೊಳಗೆ ಹೊಗೆ ಹಾಕಿ, ಹಾವನ್ನು ಓಡಿಸಿ, ಕದ್ದಿರುವ ಹೊನ್ನನ್ನು ತೆಗೆದುಕೊಡುತ್ತೇನೆ' ಎಂದು ಅಲ್ಲಿದ್ದ ಹುಲ್ಲು, ಸೌದೆಗಳನ್ನು ಪೊಟರೆಯೊಳಕ್ಕೆ ಹಾಕಿ ದುಷ್ಟಬುದ್ಧಿಯ ಮನೆಗೆ ಬೆಂಕಿ ಇಟ್ಟಂತೆ ಬೆಂಕಿ ಹಾಕಿದನು. ಅದರಲ್ಲಿ ಅಡಗಿದ್ದ ಪ್ರೇಮಮತಿ ಉಸಿರುಗಟ್ಟಿ ಸುರುಳಿ ಉರುಳಿ ಪ್ರಾಣಬಿಡುತ್ತಾನೆ. ದುಷ್ಟಬುದ್ಧಿಯ ತಂದೆಯನ್ನು ಕಂಡ ಧರ್ಮಾಧಿಕರಣರು ಇಂತಹ ದುಷ್ಟಪುತ್ರನಿಂದ ನಿನಗೆ ಈ ದುರ್ಮರಣ ಬಂದಿತು ಎನ್ನುತ್ತಾರೆ. ಹೀಗೆ ದುಷ್ಟಬುದ್ಧಿಯ ತಂತ್ರ ಆತನಿಗೆ ತಿರುಗುಬಾಣವಾಯಿತು.<br>**ಅಥವಾ**<br>ಧರ್ಮಬುದ್ಧಿ ಹಾಗೂ ದುಷ್ಟಬುದ್ಧಿ ಇಬ್ಬರು ವ್ಯಾಪಾರದಿಂದ ಬಹಳಷ್ಟು ಹೊನ್ನನ್ನು ಸಂಪಾದಿಸಿಕೊಂಡು ಹಿಂದಿರುಗುವಾಗ ಊರ ಹೊರಗಿನ ಉದ್ಯಾನವನದಲ್ಲಿ ಉಳಿದುಕೊಂಡಿದ್ದರು. ಮಧ್ಯರಾತ್ರಿಯಲ್ಲಿ ಧರ್ಮಬುದ್ಧಿ ದುಷ್ಟಬುದ್ಧಿಯನ್ನು ಕರೆದು 'ನಾವಿಬ್ಬರು ಈ ಹೊನ್ನನ್ನು ಹಂಚಿಕೊಳ್ಳೋಣ' ಎಂದಾಗ 'ನಾವಿಬ್ಬರು ಈ ಹೊನ್ನನ್ನು ಹಂಚಿಕೊಂಡು ಮನೆಯಲ್ಲಿಯೇ ಇರುವವರಲ್ಲ. ಪುನಃ ವ್ಯಾಪಾರಕ್ಕೆ ಹೋಗಲೇಬೇಕು. | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಆದ್ದರಿಂದ ನಮ್ಮಿಬ್ಬರಿಗೆ ಖರ್ಚಿಗೆ ಬೇಕಾದಷ್ಟನ್ನು ತೆಗೆದುಕೊಂಡು ಉಳಿದ ಹೊನ್ನನ್ನು ಈ ವಟವೃಕ್ಷದ ಬಳಿಯಲ್ಲಿಯೇ ಹೂತಿಡೋಣ' ಎಂದು ದುಷ್ಟಬುದ್ಧಿ ಸಲಹೆ ನೀಡುತ್ತಾನೆ. ಅದರಂತೆಯೇ ಮಾಡುತ್ತಾರೆ. ಮರುದಿನ ಇಬ್ಬರೂ ನಗರಕ್ಕೆ ಬಂದು ಸುಖವಾಗಿರುತ್ತಾರೆ. ಒಂದು ದಿನ ದುಷ್ಟಬುದ್ಧಿ ಹೂತಿಟ್ಟ ಹೊನ್ನನ್ನೆಲ್ಲ ತಾನೇ ಕದ್ದುಕೊಂಡು, ನಂತರ ಧರ್ಮಬುದ್ಧಿಯ ಬಳಿ ಬಂದು ಖರ್ಚಿಗೆ ಇನ್ನಷ್ಟು ಹೊನ್ನು ಬೇಕಾಗಿದೆ, ತರೋಣ ಎಂದು ಕರೆದುಕೊಂಡು ಹೋಗುತ್ತಾನೆ. ಆದರೆ ಅಲ್ಲಿ ಹೊನ್ನಿಲ್ಲದ್ದನ್ನು ಕಂಡು ತನ್ನ ಮೇಲೆ ಆರೋಪ ಬರುತ್ತದೆ ಎಂದು 'ನೀನೆ ಹೊನ್ನನ್ನೆಲ್ಲ ಕದ್ದಿರುವೆ' ಎಂದು ಧರ್ಮಬುದ್ಧಿಯ ಮೇಲೆಯೇ ಕಳ್ಳತನದ ಆರೋಪವನ್ನು ಹೊರಿಸುತ್ತಾನೆ. 'ಕಳ್ಳರಿಗೆ ಸುಳ್ಳೇ ಬಲ' ಎಂಬಂತೆ ಕುಟಿಲ ಮನಸ್ಸನ್ನು ಹೊಂದಿದ್ದ ದುಷ್ಟಬುದ್ಧಿ ಮತಿಗೆಟ್ಟು ಧರ್ಮಬುದ್ಧಿಯ ಮೇಲೆ ಆರೋಪ ಹೊರಿಸಿ, 'ನಿನ್ನ ಸ್ನೇಹ ಮಾಡಿ ಕೆಟ್ಟು ಹೋದೆ ಹಾ!' ಎಂದು ಬೊಬ್ಬೆ ಹೊಡೆಯುತ್ತಾನೆ. ನನ್ನ ಸ್ನೇಹಕ್ಕೆ ದ್ರೋಹ ಮಾಡಿರುವೆ ಇದು ತೀರ್ಮಾನವಾಗಲೇಬೇಕು ಎಂದು ಧರ್ಮಾಧಿಕರಣರ ಬಳಿಗೆ ಬಂದು ನಡೆದ ವೃತ್ತಾಂತವನ್ನೆಲ್ಲ ಹೇಳುತ್ತಾರೆ. ದುಷ್ಟಬುದ್ಧಿ ಧರ್ಮಾಧಿಕರಣರ ಬಳಿಯಲ್ಲಿ 'ಹೊನ್ನನ್ನು ಹೂತಿಡುವಾಗ ನಾನು ಮತ್ತು ಈತ ಬಿಟ್ಟರೆ ಬೇರೆ ಯಾರೂ ಇರಲಿಲ್ಲ. ಧರ್ಮಬುದ್ಧಿಯೇ ಕದ್ದಿರುವುದಕ್ಕೆ ಅಲ್ಲಿರುವ ವಟವೃಕ್ಷವೇ ಸಾಕ್ಷಿ' ಎಂದು ಹೇಳುತ್ತಾನೆ. ಧರ್ಮಬುದ್ಧಿಗೆ ವಂಚಿಸಬೇಕು, ತನ್ನ ತಂದೆಯಿಂದ ಸುಳ್ಳು ಹೇಳಿಸಿ ಹೊನ್ನನ್ನೆಲ್ಲ ತಾನೇ ಇಟ್ಟುಕೊಳ್ಳಬೇಕು ಎಂದು ಪೂರ್ವನಿರ್ಧಾರ ಮಾಡಿಕೊಂಡಿದ್ದ ದುಷ್ಟಬುದ್ಧಿ ಧರ್ಮಬುದ್ಧಿಯನ್ನು ಧರ್ಮಾಧಿಕರಣರ ಬಳಿಗೆ ಕರೆದುಕೊಂಡು ಬರುತ್ತಾನೆ. | |
| 42. | 'ನಾವು ಯಾವ ಸಂಕಲ್ಪವನ್ನು ಕೈಗೊಳ್ಳಬೇಕು' ಎಂಬುದು ಕವಿ ಜಿ.ಎಸ್. ಶಿವರುದ್ರಪ್ಪನವರ ಆಶಯವಾಗಿದೆ ? ತಿಳಿಸಿ.<br>**ಅಥವಾ**<br>ಸಂಕಲ್ಪ ಮತ್ತು ಅನುಷ್ಠಾನ ಕುರಿತಂತೆ ಕವಿ ಜಿ.ಎಸ್. ಶಿವರುದ್ರಪ್ಪನವರ ಅಭಿಪ್ರಾಯವೇನು ? ವಿವರಿಸಿ. | |

| ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
| --- | --- |
| ಉತ್ತರ : ಜೀವನದಲ್ಲಿ ಧನಾತ್ಮಕ ಭಾವನೆ ಹಾಗೂ ದೃಢ ಸಂಕಲ್ಪ ಹೊಂದಿರಬೇಕು. ಯಾವುದೇ ರೀತಿಯ ಸವಾಲುಗಳು ಎದುರಾದರೂ ಆತ್ಮವಿಶ್ವಾಸದಿಂದ, ನಿಷ್ಠೆಯಿಂದ ಕ್ರಿಯಾಶೀಲರಾದಾಗ ಯಶಸ್ಸು ಲಭಿಸುತ್ತದೆ. ನಮ್ಮ ಸುತ್ತಮುತ್ತ ಜಾತಿ, ಧರ್ಮ, ಮತ, ದ್ವೇಷ, ಅಸೂಯೆ, ಮೇಲುಕೀಳುಗಳೆಂಬ ಕತ್ತಲು ಆವರಿಸಿದೆ. ಪ್ರೀತಿಯೆಂಬ ಹಣತೆಯನ್ನು ಹಚ್ಚುವುದರ ಮೂಲಕ ಕತ್ತಲನ್ನು ಹೋಗಲಾಡಿಸಬಹುದು. ಜೀವನನೌಕೆ ಕಷ್ಟ, ನೋವು, ಸಂಕಟ, ದುಃಖಗಳೆಂಬ ಅಲೆಗಳಿಗೆ ಸಿಲುಕಿ ಹೊಯ್ದಾಡುತ್ತಿದೆ. ಇದನ್ನು ಎಚ್ಚರದಿಂದ ಮುನ್ನಡೆಸಿ ದಡ ಸೇರಿಸಬೇಕಾಗಿದೆ. ಮಾನವನ ಸ್ವಾರ್ಥದಿಂದ ಪರಿಸರ ಮಲಿನವಾಗುತ್ತಿದೆ. ಆಧುನೀಕರಣ, ಕೈಗಾರೀಕರಣಗಳಿಂದ ನದಿಗಳು ಮಲಿನವಾಗಿವೆ. ಕಾಡು-ಮೇಡುಗಳು ಬರಡಾಗಿವೆ. ನದಿಗಳನ್ನು ಮುಂಗಾರು ಮಳೆಯಾಗಿ ಸ್ವಚ್ಛಗೊಳಿಸಬೇಕು. ಕಾಡುಗಳಿಗೆ ವಸಂತವಾಗಿ ಚಿಗುರುವಂತೆ ಮಾಡುವ ಸಂಕಲ್ಪ ಮಾಡಬೇಕಾಗಿದೆ. ಸಮಾಜದಲ್ಲಿ ಹಲವಾರು ಜನರು ಜಾತಿ, ಮತ, ಧರ್ಮ, ಬಡತನಗಳಲ್ಲಿ ಮುಳುಗಿ ಹೋಗಿದ್ದಾರೆ. ಜಾತಿ, ಧರ್ಮ, ಮತಗಳೆಂಬ ಗೋಡೆಗಳನ್ನು ಕೆಡವಿ ಎಲ್ಲರನ್ನೂ ಸಂಪರ್ಕಿಸುವ ಪ್ರೀತಿಯ ಸೇತುವೆಯನ್ನು ನಿರ್ಮಿಸಬೇಕಾಗಿದೆ. ನಮ್ಮ ದೇಶದಲ್ಲಿ ಹಿಂದೂ, ಕ್ರೈಸ್ತ, ಪಾರಸಿ, ಇಸ್ಲಾಂ, ಸಿಖ್ ಮೊದಲಾದ ಧರ್ಮಗಳಿವೆ. ಅವರದೇ ಆದ ಧರ್ಮಗ್ರಂಥಗಳಿವೆ. ಇವು ಮನುಷ್ಯರ ಶ್ರೇಯೋಭಿವೃದ್ಧಿಗಾಗಿ ಇರುವ ದಾರಿದೀಪಗಳು ಎಂದು ಭಾವಿಸಬೇಕು. ಭಯ ಸಂಶಯಗಳಿಂದ ಜನರ ಕಣ್ಣುಗಳಲ್ಲಿ ಮಂಕು ಕವಿದಿದೆ. ಅವರಲ್ಲಿ ಭವಿಷ್ಯದ ಭರವಸೆಯ ಆತ್ಮವಿಶ್ವಾಸವನ್ನು, ಕನಸನ್ನು ಮೂಡಿಸುವ ಸಂಕಲ್ಪ ಮಾಡಬೇಕಾಗಿದೆ. ಈ ಮೂಲಕ ಕ್ರಿಯಾಶೀಲರಾದರೆ ಏನನ್ನೂ ಬೇಕಾದರೂ ಸಾಧಿಸಬಹುದು ಎಂದು ಕವಿ ಜಿ.ಎಸ್. ಶಿವರುದ್ರಪ್ಪನವರು ಹೇಳಿದ್ದಾರೆ. | |
| **ಅಥವಾ** | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಕೇವಲ ಸಂಕಲ್ಪ ಮಾಡುವುದರಿಂದ ಯಶಸ್ಸು ಗಳಿಸಲು ಸಾಧ್ಯವಿಲ್ಲ. ದೃಢನಿಷ್ಠೆಯಿಂದ ಕಾರ್ಯಪ್ರವೃತ್ತರಾದಾಗ ಸಂಕಲ್ಪವನ್ನು ಅನುಷ್ಠಾನಗೊಳಿಸಬಹುದು. ತಾನು ಕಂಡ ಕನಸುಗಳನ್ನು ನನಸಾಗಿಸಲು ಎಷ್ಟೇ ತೊಡಕುಗಳು ಬಂದರೂ ಛಲ ಬಿಡದೆ ಕ್ರಿಯಾಶೀಲರಾದಾಗ ಸಾಧನೆಗೆ ಅಸಾಧ್ಯವಾದುದು ಯಾವುದೂ ಇರುವುದಿಲ್ಲ.<br><br>ನಮ್ಮ ಸುತ್ತಲೂ ಜಾತಿಯತೆ, ಮತ, ಧರ್ಮ, ದ್ವೇಷ, ಅಸೂಯೆಗಳೆಂಬ ಕತ್ತಲೆ ಆವರಿಸಿದೆ. ಪ್ರೀತಿಯೆಂಬ ಹಣತೆ ಹಚ್ಚುವುದರ ಮೂಲಕ ಆರೋಗ್ಯಕರ, ಸಾಮರಸ್ಯದ ದ್ವೇಷರಹಿತ ಸಮಾಜವನ್ನು ನಿರ್ಮಿಸಬಹುದು. ಸಂಸಾರ ನೌಕೆ ಕಷ್ಟ, ನಷ್ಟ, ದುಃಖ, ನೋವು, ಸಂಕಟಗಳೆಂಬ ಅಲೆಗಳಿಗೆ ಸಿಲುಕಿ ನಲುಗುತ್ತಿದೆ. ಪರಸ್ಪರ ಪ್ರೀತಿ, ವಿಶ್ವಾಸ ಹೊಂದಾಣಿಕೆಯಿಂದ ಸುಂದರ ಬದುಕನ್ನು ಕಟ್ಟಿಕೊಳ್ಳಬಹುದು. ಕೈಗಾರೀಕರಣ,ಆಧುನೀಕರಣ, ಜಾಗತೀಕರಣಗಳಿಂದಾಗಿ ಪರಿಸರ ನಾಶವಾಗುತ್ತಿದೆ. ಜೀವಜಲಗಳು ಕಲುಷಿತಗೊಂಡು, ಕಾಡು–ಮೇಡುಗಳು ಬರಡಾಗುತ್ತಿವೆ. ಜೀವಜಲಕ್ಕೆ ಪ್ರಾಶಸ್ತ್ಯ ನೀಡಬೇಕು. ಸ್ವಚ್ಛತೆಯ ಜವಾಬ್ದಾರಿ ನಮ್ಮ ಮೇಲಿದೆ. ಕಾಡುಗಳು ಸಮೃದ್ಧಿಯ ಸಂಕೇತ. ಕಾಡುಗಳನ್ನು ರಕ್ಷಿಸಬೇಕು. ಮುಂಗಾರು ಮಳೆಯಾಗಿ ನದೀಜಲಗಳನ್ನು, ವಸಂತ ಋತುವಾಗಿ ಕಾಡುಗಳನ್ನು ರಕ್ಷಿಸಿ ಪರಿಸರ ಸಮತೋಲನವನ್ನು ಕಾಪಾಡಬೇಕಾಗಿದೆ.<br><br>ಜಾತಿ, ಮತ, ಧರ್ಮ, ದ್ವೇಷ, ಅಸೂಯೆಗಳಲ್ಲಿ ಜನರು ಮುಳುಗಿ ಹೋಗಿರುವುದಲ್ಲದೆ ಒಬ್ಬರನ್ನೊಬ್ಬರು ಸಂಪರ್ಕಿಸದಂತೆ ಗೋಡೆ ನಿರ್ಮಿಸಿಕೊಂಡಿದ್ದಾರೆ. ಇಡೀ ಜಗತ್ತೇ ಒಂದು, ಮನುಷ್ಯ ಕುಲ ಒಂದೇ ಎಂದು ಸಾರಬೇಕು. ಈ ಗೋಡೆಯನ್ನು ಕೆಡವಿ ಮನುಷ್ಯರನ್ನು ಸಂಪರ್ಕಿಸುವ ಸೇತುವೆಯನ್ನು ನಿರ್ಮಿಸಬೇಕು.<br><br>ಹಿಂದೂ, ಕ್ರೈಸ್ತ, ಇಸ್ಲಾಂ, ಸಿಖ್, ಪಾರಸಿ ಧರ್ಮಗಳು ಹಾಗೂ ಈ ಧರ್ಮದ ಕೃತಿಗಳು ದಾರಿತೋರುವ ಮಾರ್ಗಗಳು ಎಂದು ಭಾವಿಸಬೇಕು. ಭಯ ಸಂಶಯಗಳಿಂದ ಕಣ್ಣುಗಳು ಕಂದಿ ಹೋಗಿ, | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಭರವಸೆ ಕಳೆದುಕೊಂಡವರ ಕಣ್ಣುಗಳಲ್ಲಿ ಉಜ್ವಲ ಭವಿಷ್ಯದ ಭರವಸೆಯ ಕನಸನ್ನು ಬಿತ್ತಬೇಕು. ಈ ಮೂಲಕ ಸರ್ವಜನಾಂಗದ ಸಮನ್ವಯತೆಯ, ಸ್ವಾಸ್ಥ್ಯಯುತವಾದ ಸಮಾಜ ನಿರ್ಮಿಸಬಹುದು. ಹೀಗೆ ಸಂಕಲ್ಪವನ್ನು ಅನುಷ್ಠಾನಕ್ಕೆ ತರಬೇಕು ಎಂದು ಕವಿ ಜಿ.ಎಸ್. ಶಿವರುದ್ರಪ್ಪನವರು ಹೇಳಿದ್ದಾರೆ. | |
| **XIII.** | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು : (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | **1 × 4 = 4** <br> **( 2 + 2 )** |
| 43. | ಜಗತ್ತು ಪೂಜಿಸುವುದು ಶಕ್ತಿಯನ್ನು; ದುರ್ಬಲತೆಯನ್ನಲ್ಲ ಎಂಬುದನ್ನು ಯುವಕರು ಸರಿಯಾಗಿ ತಿಳಿದಿರಬೇಕು. ಶಕ್ತನಿಗೆ ಎಲ್ಲರೂ ಆಪ್ತರು, ಅಶಕ್ತನನ್ನು ಎಲ್ಲರೂ ತಿರಸ್ಕರಿಸುವರು. ದೇಹ, ಮನಸ್ಸು ಸರಿಯಾಗಿರುವ ನಾವು ಸಿಕ್ಕ ಅವಕಾಶಗಳನ್ನು ಸರಿಯಾಗಿ ಬಳಸಿಕೊಂಡು ಶಕ್ತಿಯನ್ನು ಸರ್ವತೋಮುಖವಾಗಿ ಹೆಚ್ಚಿಸಿಕೊಳ್ಳಬೇಕು. ದೈಹಿಕ, ಮಾನಸಿಕ, ಬೌದ್ಧಿಕ, ನೈತಿಕ ಬಲಗಳ ಜೊತೆಗೆ ಆತ್ಮಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಶಕ್ತಿ ಸೌಭಾಗ್ಯ ಚಿರಜೀವನದ ಒಳಗುಟ್ಟು, ದುರ್ಬಲತೆ ಎಂಬುದು ಚಿಂತೆ ದುಃಖಗಳ ಮೂಲ ಎಂದ ಸ್ವಾಮಿ ವಿವೇಕಾನಂದರು 'ಬಲಿಷ್ಠರಾಗಿ, ಕಬ್ಬಿಣದ ಮಾಂಸಖಂಡ, ಉಕ್ಕಿನ ನರಮಂಡಲ, ವಿದ್ಯುತ್ತಿನ ಇಚ್ಛಾಶಕ್ತಿಯ ಬಲಗಳನ್ನು ಬೆಳೆಸಿಕೊಂಡು ನಿಮ್ಮ ಕಾಲ ಮೇಲೆ ನಿಲ್ಲಿ' ಎಂದು ತಿರುತಿರುಗಿ ಸಾರಿದರು. <br><br> ನಮ್ಮನ್ನು ದುರ್ಬಲಗೊಳಿಸುವ ನೂರಾರು ಕತೆ, ಘಟನೆ, ಚಿತ್ರಗಳು ನಿತ್ಯವೂ ಪ್ರಸಾರವಾಗುತ್ತಿರಬಹುದು. ಇವು ಯುವಕರ ಮನಸ್ಸನ್ನು ತಲ್ಲಣಗೊಳಿಸಬಹುದು. ಆದರೆ ಇದನ್ನು ದಾಟಿ ಮೇಲೇರಲು ಬೇಕಾದ ಶಕ್ತಿ ನಮ್ಮಲ್ಲಿಯೇ ಇದೆ. ಪ್ರತಿಯೊಬ್ಬನ ಮನಸ್ಸಿನ ಆಳದಲ್ಲಿ ದೈವೀಶಕ್ತಿ ಇದೆ. ಅಪಾರ ಶಕ್ತಿ ಇದ್ದರೂ ನಾವು ಗುಲಾಮರಂತೆ ವರ್ತಿಸುತ್ತೇವೆ. ಇದಕ್ಕೆ ಕಾರಣ ಒಂದು ಅಜ್ಞಾನ, ಇನ್ನೊಂದು ಬಾಲ್ಯದಿಂದ ಬೆಳೆಸಿಕೊಂಡು ಬಂದ ನಿಷೇಧಾತ್ಮಕ ಭಾವನೆ. ಪ್ರತಿಯೊಂದು | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ನಿಷೇಧಾತ್ಮಕ ಭಾವನೆ ಅಥವಾ ಯೋಚನೆ ಒಳಗಿನ ಆ ಅಪಾರ ಶಕ್ತಿಯನ್ನು ಪರಿಮಿತಗೊಳಿಸಿ ನಮ್ಮನ್ನು ದುರ್ಬಲರನ್ನಾಗಿ ಮಾಡುತ್ತದೆ. ಪ್ರತಿಯೊಂದು ಆತ್ಮವಿಶ್ವಾಸದ ಭಾವನೆ ಮತ್ತು ರಚನಾತ್ಮಕ ಯೋಚನೆ ನಮ್ಮ ಅಭ್ಯುದಯಕ್ಕೆ ನೆರವಾಗುತ್ತದೆ.<br><br>ಪ್ರಶ್ನೆಗಳು :<br>ಅ) ಅಪಾರಶಕ್ತಿ ಇದ್ದರೂ ಗುಲಾಮರಂತೆ ವರ್ತಿಸಲು ಕಾರಣವೇನು ?<br>ಬ) ಸ್ವಾಮಿ ವಿವೇಕಾನಂದರು ಯುವಕರಿಗೆ ನೀಡಿದ ಸಂದೇಶವೇನು ? ತಿಳಿಸಿ.<br><br>**ಉತ್ತರ :**<br>ಅ) ಪ್ರತಿಯೊಬ್ಬರ ಮನಸ್ಸಿನ ಆಳದಲ್ಲಿ ಸಾವಿಲ್ಲದ ನೋವಿಲ್ಲದ ದೈವೀಶಕ್ತಿ ಇದೆ. ಇಂಥ ಅಪಾರ ಶಕ್ತಿಯಿದ್ದರೂ ಗುಲಾಮರಂತೆ ವರ್ತಿಸಲು ಕಾರಣ ಒಂದು ಅಜ್ಞಾನ, ಇನ್ನೊಂದು ಬಾಲ್ಯದಿಂದ ಬೆಳೆಸಿಕೊಂಡು ಬಂದ ನಿಷೇಧಾತ್ಮಕ ಭಾವನೆ, ಪ್ರತಿಯೊಂದು ನಿಷೇಧಾತ್ಮಕ ಭಾವನೆ ಅಥವಾ ಯೋಚನೆ ಒಳಗಿನ ಅಪಾರ ಶಕ್ತಿಯನ್ನು ಪರಿಮಿತಗೊಳಿಸಿ ದುರ್ಬಲರನ್ನಾಗಿಸುತ್ತದೆ.<br>ಬ) ಶಕ್ತಿ ಸೌಭಾಗ್ಯ ಚಿರಜೀವನದ ಒಳಗುಟ್ಟು ದುರ್ಬಲತೆ ಚಿಂತೆ ದುಃಖಗಳ ಮೂಲ ಎಂದ ಸ್ವಾಮಿ ವಿವೇಕಾನಂದರು 'ಬಲಿಷ್ಠರಾಗಿ ಕಬ್ಬಿಣದ ಮಾಂಸಖಂಡ, ಉಕ್ಕಿನ ನರಮಂಡಲ, ವಿದ್ಯುತ್ತಿನ ಇಚ್ಛಾಶಕ್ತಿಯ ಬಲಗಳನ್ನು ಬೆಳೆಸಿಕೊಂಡು ನಿಮ್ಮ ಕಾಲ ಮೇಲೆ ನಿಲ್ಲಿ' ಎಂದು ತಿರುತಿರುಗಿ ಯುವಕರಿಗೆ ಸಾರಿದರು. | |
| **XIV.** | **ಪತ್ರ ಲೇಖನ ಬರೆಯುವುದು :** | **1 × 5 = 5** |
| 44. | ನಿಮ್ಮನ್ನು ದೇವನಹಳ್ಳಿಯ ಸರ್ಕಾರಿ ಪ್ರೌಢಶಾಲೆಯ 'ಅದ್ವಿತ್' ಎಂದು ಭಾವಿಸಿಕೊಂಡು, ಬೀದಿದೀಪ ಸರಿಪಡಿಸಿಕೊಡುವಂತೆ ಕೋರಿ ಗ್ರಾಮಪಂಚಾಯಿತಿ ಅಧ್ಯಕ್ಷರಿಗೊಂದು ಮನವಿ ಪತ್ರವನ್ನು ಬರೆಯಿರಿ.<br><br>**ಅಥವಾ**<br><br>ನಿಮ್ಮನ್ನು ಮೈಸೂರಿನ ಸರ್ಕಾರಿ ಪ್ರೌಢಶಾಲೆಯ 'ಅಶ್ವತ್ಥ್' ಎಂದು | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಭಾವಿಸಿಕೊಂಡು, ಶಾಲೆಯಲ್ಲಿ ಆಚರಿಸಿದ 'ಸದ್ಭಾವನಾ ದಿನ' ವನ್ನು ವಿವರಿಸಿ ಬೆಂಗಳೂರಿನ ವಿವೇಕಾನಂದ ನಗರದ ನಿವಾಸಿಯಾಗಿರುವ 'ಕಸ್ತೂರಿ' ಎಂಬ ಹೆಸರಿನ ತಾಯಿಯವರಿಗೆ ಪತ್ರವನ್ನು ಬರೆಯಿರಿ. | |
| | *ವ್ಯಾವಹಾರಿಕ / ಮನವಿ ಪತ್ರ :* | |
| | ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ವಂದನೆಯೊಂದಿಗೆ ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | *ಖಾಸಗಿ / ತಾಯಿಗೆ ಪತ್ರ :* | |
| | ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ಮುಕ್ತಾಯ, ಇಂತಿ, ಸಹಿ, ಹೊರ ವಿಳಾಸ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| **XV.** | **ಪ್ರಬಂಧ ಬರೆವಣಿಗೆ :** | **1 × 5 = 5** |
| 45. | ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ | |
| | **ಅಥವಾ** | |
| | ಗ್ರಂಥಾಲಯಗಳ ಮಹತ್ವ | |
| | ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| | ಒಡಲು, ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ | 2 ಅಂಕಗಳು |
| | ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| | ಭಾಷಾಶೈಲಿಗೆ, ಪದಬಂಧ | 1 ಅಂಕ |
| | ಒಟ್ಟು | 5 ಅಂಕಗಳು |